# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ಹೇರೋಹಳ್ಳಿ ಉಪ-ವಿಭಾಗದ,**

**ವಾರ್ಡ್ ನಂ.40, ದೊಡ್ಡಬಿದರಕಲ್ಲು, ಕರಿಹೋಬನಹಳ್ಳಿ, ಬೆಂಗಳೂರು-5600 58.**

---

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾ.ರಾ.ನಗರ ವಲಯ, ಹೇರೋಹಳ್ಳಿ ಉಪ-ವಿಭಾಗದ ವಾರ್ಡ್ ನಂ.40ರಲ್ಲಿ ದಿನಾಂಕ: 22.01.2021 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.**

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.**

1. ಡಾ॥ ಶ್ರೀಮತಿ ಕೃತಿಕಾ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ಜಿ.ನಾಗಭೂಷಣ್, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
3. ಶ್ರೀ ಡಿ.ಎಂ.ರಮೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು.
4. ಶ್ರೀ ಮುತ್ತೇಗೌಡ, ಕಿರಿಯ ಆರೋಗ್ಯ ಪರಿವೀಕ್ಷಕರು.
5. ಶ್ರೀ ವೆಂಕಟಪ್ಪ.ಡಿ, ಕಂದಾಯ ಮೌಲ್ಯಮಾಪಕರು.
6. ಶ್ರೀ ಮಂಜುನಾಥ್. ಕೆ.ಎಲ್, ಕಂದಾಯ ಪರಿವೀಕ್ಷಕರು.
7. ಶ್ರೀ ಎಂ.ಅಮರನಾಥ್, ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ.
8. ಶ್ರೀ ವಿಜಯ್ ಸಿ, ಕಿರಿಯ ಅಭಿಯಂತರರು, ಬೆಸ್ಕಾಂ.
9. ಶ್ರೀ ನಂಜುಂಡ ಆರಾಧ್ಯ, ಬಿ.ಎಂ.ಟಿ.ಸಿ ಡಿಪೋ 22.
10. ಶ್ರೀ ಆಂಜನಪ್ಪ, ಕಂದಾಯ ಪರಿವೀಕ್ಷಕರು.
11. ಶ್ರೀ ಸಂತೋಷ್ ಕುಮಾರ್, ತೆರಿಗೆ ಪರಿವೀಕ್ಷಕರು.
12. ಶ್ರೀ ಆನಂದ್, ಸ.ಕಾ.ಅ, ಬಿ.ಡಬ್ಲ್ಯೂ.ಎಸ್.ಎಸ್.ಬಿ.
13. ಶ್ರೀಮತಿ ಉಶಾ ಕಿರಣಕುಮಾರ್, ಕಂದಾಯ ಪರಿವೀಕ್ಷಕರು.
14. ಶ್ರೀಮತಿ ಲಕ್ಷ್ಮಿ ಕೆ ಆರ್, **SWM Plant** ಅಧಿಕಾರಿಗಳು.
15. ಶ್ರೀ ಬಲರಾಮ್, ಟಿ.ಐ ವಾರ್ಡ ನಂ. 40.

**ಈ ಕೆಳಕಂಡ ಅಧಿಕಾರಿಗಳು ಸಭೆಯಲ್ಲಿ ಗೈರು ಹಾಜರಾಗಿರುತ್ತಾರೆ.**

1. ಶ್ರೀ ರಮೇಶ್, ಪಶು ವೈದ್ಯರು.
2. ಶ್ರೀ ಹೆಚ್.ಡಿ.ವೆಂಕಟೇಶ್, ತೋಟಗಾರಿಕೆ ನಿರೀಕ್ಷಕರು, ತೋಟಗಾರಿಕೆ ಇಲಾಖೆ.
3. ಶ್ರೀ ಜಿ.ಗೋವಿಂದರಾಜು, ಅರಣ್ಯ ಇಲಾಖೆ,
4. ಶ್ರೀ ಜಿ.ಗೋವಿಂದರಾಜು, ಸಹಾಯಕ ಅಭಿಯಂತರರು, ಕೆರೆಗಳ ವಿಭಾಗ, ರಾ.ರಾ.ನಗರ.ವಲಯ.
5. ಮೇಘನಾ.ಬಿ.ಕೆ, ಸಹಾಯಕ ಅಭಿಯಂತರರು
6. ಸಮಾಜ ಕಲ್ಯಾಣ ಇಲಾಖೆ ಅಧಿಕಾಗಳು.
7. ಪೋಲೀಸ್ ಇನ್ಸ್‌ಪೆಕ್ಟರ್, ಬ್ಯಾಡರಹಳ್ಳಿ ಪೋಲೀಸ್ ಠಾಣೆ.
8. ಪೋಲೀಸ್ ಇನ್ಸ್‌ಪೆಕ್ಟರ್, ಪೀಣ್ಯ ಪೋಲೀಸ್ ಠಾಣೆ.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**1) ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸಿದ ವಿಚಾರ.**

1. ಕೈಗಾರಿಕಾ ಪ್ರದೇಶದಲ್ಲಿನ ಕೈಗಾರಿಕಾ ತ್ಯಾಜ್ಯಗಳನ್ನು ವಿಲೇವಾರಿ ಮಾಡುಲು ಇಲಾಕೆಯಿಂದ ಯಾವುದೇ ಅನುಮತಿ ಇರುವುದಿಲ್ಲ ಎಂದು ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ•ಮುತ್ತೇಗೌಡರವರು ತಿಳಿಸಿದರು.
2. ಕೈಗಾರಿಕಾ ತ್ಯಾಜ್ಯಗಳ ನಿರ್ವಹಣೆಗೆ, ಕೈಗಾರಿಕೆಗಳ ಮಾಲೀಕರು ಮಾಲಿನ್ಯ ಮಂಡಳಿಗೆ ಪತ್ರ ಬರೆದು ಪ್ರತ್ಯೇಕ ವಾಹನದ ವ್ಯವಸ್ತೆ ಮಾಡಿಕೊಳ್ಳಬಹುದಾಗಿದೆ ಎಂದು ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ಮುತ್ತೇಗೌಡರವರು ತಿಳಿಸಿದರು

**2) ವಾರ್ಡ್ ವ್ಯಾಪ್ತಿಯಲ್ಲಿನ ಕೋವಿಡ್ ನಿಯಂತ್ರಣ ಬಗ್ಗೆ ಚರ್ಚಿಸಲಾದ ವಿಚಾರಗಳು.**

1. ವಾರ್ಡ್ ವ್ಯಾಪ್ತಿಯಲ್ಲಿ ದಿನಾಂಕ: 21.01.2021 ರವರೆಗೆ 1878 ಕೋವಿಡ್ ಕೇಸ್‌ಗಳಿದ್ದು, ಅದರಲ್ಲಿ 1819 ಜನ ಆಸ್ಪತ್ರಯಿಂದ ಡಿಸ್ಚಾರ್ಜ್ ಆಗಿದ್ದು, 14 ಜನರಿಗೆ ಕೋವಿಡ್ ಪಾಸಿಟಿವ್ ಇದ್ದು, ಮತ್ತು 45 ಜನರು ಮರಣ ಹೊಂದಿರುತ್ತಾರೆ ಎಂದು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿದರು.
2. ಕೋವಿಡ್ ವಾಕ್ಸಿನ್‌ಗಳನ್ನು ಈಗಾಗಲೇ ನೀಡುತ್ತಿದ್ದು, 74 ಜನರಲಲಿ 34 ಜನರು ವ್ಯಾಕ್ಸಿನ್ ತೆಗೆದುಕೊಂಡಿರುತ್ತಾರೆ ಎಂದು ತಿಳಿಸಿದರು.

**3) ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ ಚರ್ಚಿಸಲಾದ ವಿಚಾರ.**

1. ವಾರ್ಡ್ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆಗಳ ಗುಂಡಿಗಳನ್ನು ಮುಚ್ಚಲು ಈಗಾಗಲೇ 100 ಕೋಟಿ ಅನುಧಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಸಹಾಯಕ ಅಭಿಯಂತರರು ಸೂಚಿಸಿದರು.

**4) ವಾರ್ಡ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಾಮಗಾರಿಗಳಾದ ಕುಡಿಯುವ ನೀರು ಮತ್ತು ಒಳಚರಂಡಿಯ ಬಗ್ಗೆ ಚರ್ಚಿಸುವ ವಿಚಾರ.**

1. ವಾಲ್ಮೀಕಿ ನಗರ, 10ನೇ ಅಡ್ಡರಸ್ತೆಯಲ್ಲಿ ಎಲ್&ಟಿ ರವರು ದೊಡ್ಡ ದೊಡ್ಡ ಕಲ್ಲುಗಳನ್ನು ಅಲ್ಲಿಯೇ ಬಿಟ್ಟಿದ್ದು ಅವುಗಳನ್ನು ಕೂಡಲೇ ತೆರವುಗೊಳಿಸಬೇಕೆಂದು ಹಿಂದಿನ ಸಭೆಯಲ್ಲಿ ಸೂಚಿಸಿದರೂ ಸಹ ಯಾವುದೇ ಕ್ರಮ ಕೈಗೋಂಡಿಲ್ಲ ಎಮದು ಸದಸ್ಯರು ಸೂಚಿಸಿದರು.
2. ಎಲ್&ಟಿ ಯ ರಾಜಕುಮಾರ್ ಎಂಬುವವರು ಸಾರ್ವಜನಿಕರಿಂದ ಅನಧಿಕೃತವಾಗಿ ಹಣ ಸಂಗ್ರಹಿಸುವುದು ಕಂಡುಬಂದಿದ್ದು , ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸದಸ್ಯರು ಸೂಚಿಸಿದರು.
3. ಓಳ ಚರಂಡಿ ಸಂಪರ್ಕಕ್ಕೆ ತೊಂದರೆ /ಗೊಂದಲ ಇರುವ ಜಾಗಗಳಲ್ಲಿ ಸರ್ವೇ ಮಾಡಿಸಿ ನಕ್ಷೆ ಪಡೆಯಲು ಸೂಚಿಸಿದರು.
4. ಪುಟ್ಟಣ್ಣ ಸ್ಕೂಲ್ ಹತ್ತಿರ ಲಿಂಗಧೀರನಹಳ್ಳಿ ಕೆರೆಗೆ ಸ್ಯಾನಿಟರಿ ನೀರು ಬಂದು ಸೇರುತ್ತಿದ್ದು, ಅದನ್ನು ಕೂಡಲೇ ಬಂದ್ ಮಾಡಿ ಅಗತ್ತಯ ಕ್ರಮ ಕೈಗೊಂಡು ತುರ್ತಾಗಿ ಸರಿಪಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಗೆ ಸೂಕ್ತ ಕ್ರಮ ಕೈಗೊಳ್ಳಲು ಸದಸ್ಯರು ಸೂಚಿಸಿದರು.

**5) ವಾರ್ಡ್ ವ್ಯಾಪ್ತಿಯಲ್ಲಿನ ಬೆಸ್ಕಾಂ ಇಲಾಖೆಯ ಬಗ್ಗೆ ಚರ್ಚಿಸಿದ ವಿಚಾರಗಳು.**

1. ಮೈಸೂರು ಲ್ಯಾಂಪ್ಸ್ ಲೇಔಟ್ ನಲ್ಲಿ ಕಂಬ ಮುರಿದಿದ್ದು ಈ ಕೂಡಲೇ ಸರಿಪಡಿಸಬೇಕೆಂದು ಸಂಭಮದಪಟ್ಟ ಬೆಸ್ಕಾಂ ಅಭಿಯಂತರರಿಗೆ ಸದಸ್ಯರು ಸೂಚಿಸಿದರು.

**6) ವಾರ್ಡ್ ವ್ಯಾಪ್ತಿಯಲ್ಲಿನ SWD ಇಲಾಖೆಯ ಬಗ್ಗೆ ಚರ್ಚಿಸಿದ ವಿಚಾರಗಳು.**

1. ನವಿಲು ನಗರದಲ್ಲಿ ರಾಜಕಾಲುವೆ ಕಲ್ವರ್ಟ ದುರಸ್ಥಿಗೊಂಡು ಕುಸಿಯುವ ಸಂಭವವಿರುತ್ತದೆ. ಆದುದರಿಂದ ತುರ್ತಾಗಿ ಹೊಸ ಕಲ್ವರ್ಟ್ ನಿರ್ಮಿಸಲು ಸದಸ್ಯರು ಸೂಚಿಸಿದರು.
2. ಬೃಂದಾವನನಗರ ದಿಂದ ರಾಘವೇಂದ್ರ ನಗರ ಸಂಪರ್ಕಿಸಲು ರಾಜಕಾಲುವೆಗೆ ತುರ್ತಾಗಿ ಕಲ್ವರ್ಟ ನಿರ್ಮಿಸಬೇಕೆಂದು ಸದಸ್ಯರು ಸೂಚಿಸಿದರು.
3. ಚಕ್ರನಗರ ಚಂದ್ರಶೇಖರ ಆಶ್ರಮಕ್ಕೆ ಮಂಜೂರಾಗಿರುವ ಮಳೆ ನೀರುಗಾಲುವೆ ಕಾಮಾಗಾರಿಯು ಅಲ್ಲಿ ಅವಶ್ಯಕತೆ ಇಲ್ಲದೇ ಇರುವುದರಿಂದ ಬೇರೆ ಅವಶ್ಯಕತೆ ಇರುವ ಸ್ಥಳಕ್ಕೆ ವರ್ಗಾಯಿಸಬೇಕೆಂದು ಸದಸ್ಯರು ಸೂಚಿಸಿದರು.
4. ನರಸಪ್ಪನಹಳ್ಳಿ ಕೆರೆಯಿಂದ ಗಂಗೊಂಡನಹಳ್ಳಿ ಕೆರೆ ವರೆಗೆ, ಟ್ರೀ ಅಪಾರ್ಟಮೆಂಟ್ ನಿಂದ ಹೊಸಹಳ್ಳಿ ವರೆಗೆ , ಸುವರ್ಣನಗರ, ಭಗೀರಥ ಹೋಟೆಲ್ ನಿಂದ ಲಿಂಗಧೀರನಹಳ್ಳಿ ಕೆರೆ ವರೆಗೆ, ಅಂದ್ರಹಳ್ಳಿ ಕೆರೆ ಇಂದ ಗಂಗೊಂಡನಹಳ್ಳಿ ಆರ್ಚ್ ವರೆಗೆ ಮತ್ತು ಲಿಂಗಧೀರನಹಳ್ಳಿ ಕರೆ ಇಂದ ಕಾಚೋಹಳ್ಳಿ ಕೆರೆ ವರೆಗೆ ಮಳೆನೀರುಗಾಲುವೆ ತುಂಬಾ ಅವಶ್ಯಕತೆ ಇದ್ದು ಹೊಸದಾಗಿ ಪ್ರಸ್ತಾವನೆ ಸಲ್ಲಿಸಬೇಕೆಂದು ಸದಸ್ಯರು ಮಳೆನೀರುಗಾಲುವೆ ಅಭಿಯಂತರರಾದ ಶ್ರೀ ಅಮರನಾಥ ರವರಿಗೆ ಸೂಚಿಸಿದರು.
5. ಬವಾನಿ ನಗರದಲ್ಲಿ ಮಳೆಗಾಲದ ಸಮಯದಲ್ಲಿ ರಾಜಕಾಲುವೆ ಉಕ್ಕಿ ಪ್ರವಾಹಭೀತಿ ಇರುವುದರಿಂದ ಸುಮಾರು 5 ಕೋಟಿಗಳಷ್ಟು ಉಪ ಕಾಲುವೆ ನಿರ್ಮಿಸಲು ಮೀಸಲಿಡಬೇಕೆಂದು ಸದಸ್ಯರು ಸೂಚಿಸಿದರು.
6. ವಾರ್ಡ ವ್ಯಾಪ್ತಿಯಲ್ಲಿ ಇರುವ ಹಳ್ಳಗಳ ಕಾಮಗಾರಿ ಆರಂಭಿಸುವ ಮುನ್ನ ವಾರ್ಡ ಕಮಿಟಿ ಸದಸ್ಯರಿಗೆ ತಿಳಿಸುವಂತೆ ಸೂಚಿಸಿದರು.
7. ವಾರ್ಡ ವ್ಯಾಪ್ತಿಯಲ್ಲಿ ಮಳೆ ನೀರುಗಾಲುವೆ ಹಾದುಹೋಗುವ ಮಾರ್ಗದ ಸರ್ವೇ ನಕ್ಷೆಯನ್ನು ವಾರ್ಡ ಕಛೇರಿಯಲ್ಲಿ ಹಾಕುವಂತೆ ಸೂಚಿಸಿದರು.

7) ವಾರ್ಡ್ ವ್ಯಾಪ್ತಿಯಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಚರ್ಚಿಸಲಾದ ವಿಚಾರ

1. ವಾರ್ಡ್ ಕಮಿಟಿಯ ಪತ್ರ ವ್ಯವಹಾರಕ್ಕಾಗಿ ಒಬ್ಬ ಸಹಾಯಕರನ್ನು ನೇಮಿಸುವಂತೆ ಎ.ಆರ್.ಓ ರವರಿಗೆ ಪತ್ರ ಬರೆಯುವಂತೆ ಸದಸ್ಯರು ಸೂಚಿಸಿದರು.

8) ವಾರ್ಡ್ ವ್ಯಾಪ್ತಿಯಲ್ಲಿ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಚರ್ಚಿಸಲಾದ ವಿಚಾರ

1. ಈ ಸಭೆಗೆ ತೋಟಗಾರಿಕೆ ಇಲಾಖೆ ರವರು ಗೈರಾಗಿದ್ದುದುರಿಂದ ಮುಂದಿನ ಸಭೆ ಗೆ ಕಡ್ಡಾಯವಾಗಿ ಹಾಜಾರಾಗಲು ಸೂಚಿಸಲು ತಿಳಿಸಿದರು.
2. ವಾರ್ಡ ವ್ಯಾಪತಿಯಲ್ಲಿನ ಉದ್ಯಾನವನಗಳ ಗೇಟ್, ಲೈಟ್ ಮತ್ತು ಪೂಟ್‌ಪಾತ್ ಗಳ ನಿರ್ವಹಣೆ ಸರಿಯಾಗಿ ಆಗದೇ ಇರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಹಿಂದಿನ ಸಭೆಯಲ್ಲಿ ಚರ್ಚಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸೂಚಿಸಿದರು.

9) ವಾರ್ಡ್ ವ್ಯಾಪ್ತಿಯಲ್ಲಿ SWM Plant ಗೆ ಸಂಬಂಧಿಸಿದಂತೆ ಚರ್ಚಿಸಲಾದ ವಿಚಾರ

1. ,ಪ್ಲಾಂಟ್ ನ ಸಂಪೂರ್ಣ ನಿರ್ವಹಣೆಯನ್ನು ಖಾಸಗಿ ಕಂಪನಿಗೆ ವಹಿಸಲಾಗುವುದು ಎಂದು SWM Plant ಅಭಿಯಂತರರಿಗೆ ಸದಸ್ಯರು ಸೂಚಿಸಿದರು.
2. ನೊಣಗಳನ್ನು ಇನ್ನು ಹೆಚ್ಚಿನ ಪ್ರಮಾಣದಲ್ಲಿ ನಿಯಂತ್ರಿಸಬೇಕೆಂದು ಸದಸ್ಯರು ಸೂಚಿಸಿದರು

10) ವಾರ್ಡ್ ವ್ಯಾಪ್ತಿಯಲ್ಲಿ BMTC ಗೆ ಸಂಬಂಧಿಸಿದಂತೆ ಚರ್ಚಿಸಲಾದ ವಿಚಾರ

1. ತಿಪ್ಪೇನಹಳ್ಳಿ ಮಾರ್ಗ ವಾಗಿ ಸಾರ್ವಜನಿಕರಿಗೆ, ಶಾಲಾ ಮಕ್ಕಳಿಗೆ ಅನೂಕೂಲ ವಾಗುವಂತೆ ಬಸ್ ಬಿಡುವಂತೆ ಸದಸ್ಯರು ಸೂಚಿಸಿದರು.
2. ವಾರ್ಡ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ, ಶಾಲಾ ಮಕ್ಕಳಿಗೆ ಅನೂಕೂಲ ವಾಗುವಂತೆ ಬಸ್ ಸಂಚರಿಸಲು ಅನುವು ಮಾಡಿಕೊಡಬೇಕೆಂದು ಸದಸ್ಯರು ಸೂಚಿಸಿದರು.

11) ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಲಾದ ಇತರ ವಿಚಾರಗಳು.

1. ಕೆರೆ ವಿಭಾಗದ ಅಧಿಕಾರಿಗಳು ಎಲ್ಲಾ ಸಭೆಗಳಿಗೂ ಗೈರು ಹಾಜಾರಾಗಿರುವುದರಿಂದ ಕನಿಷ್ಟ ತಿಂಗಳಿಗೆ ಒಂದು ಸಭೆಗೆ ಹಾಜಾರಾಗಲು ತಿಳಿಸುವಂತೆ ಸದಸ್ಯರು ಸೂಚಿಸಿದರು.
2. ಅಂದ್ರಹಳ್ಳಿ ಕೆರೆಯಲ್ಲಿ BWSSB ರವರು ಹೊಸ ಒಳ ಚರಂಡಿ ಕೊಳವೆ ಮಾರ್ಗ ಅಳವಡಿಸಬೇಕಾಗಿದ್ದು, ಇದರ ಬಗ್ಗೆ ವಾರ್ಡ ಸಭೆಯಲ್ಲಿ ಚರ್ಚಿಸಿ ಕೆರೆ ವಿಭಾಗದ ಅಭಿಯಂತರರು ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜಾರಾಗಬೇಕೆಂದು ಸದಸ್ಯರು ಸೂಚಿಸಿದರು.
3. ಸದಸ್ಯರಾದ ಎಂ.ಮಂಜುನಾಥ್ ರವರು, ಚೆನ್ನನಾಯಕನಪಾಳ್ಯ, ರೆಡ್ಡಿಕಟ್ಟೆ, ಮುನೇಶ್ವರ ಬಡಾವಣೆ, ಮೈಸೂರು ಲ್ಯಾಂಪ್ ಬಡಾವಣೆ, ಬವಾನಿನಗರ ಮತ್ತು ಕಾಮತ್ ಬಡಾವಣೆಗಳಲ್ಲಿ ರಸ್ತೆಗಳು, ಚರಂಡಿಗಳು, ಬೋರ್‌ವೆಲ್,ವಿದ್ಯುತ್ ಕಂಬಗಳು ಅವಶ್ಯಕತೆ ಇದ್ದು, ಈ ಕಾಮಗಾರಿಗಳನ್ನು ತುರ್ತಾಗಿ ಮಾಡಿಸಿಕೊಡಬೇಕೆಂದು ಪತ್ರದ ಮೂಲಕ ಮನವಿ ಮಾಡಿದರು.

**ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.**

ವಂದನಾರ್ಪನೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.40, ದೊಡ್ಡಬಿದರಕಲ್ಲು

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ.40, ದೊಡ್ಡಬಿದರಕಲ್ಲು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:-

ವಾರ್ಡ್ ಸಮಿತಿ ಅಧ್ಯಕ್ಷರ ಮತ್ತು ಸದಸ್ಯರುಗಳ ಮಾಹಿತಿಗಾಗಿ.

1. ಡಾ॥ ಶ್ರೀಮತಿ ಕೃತಿಕಾ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ರವರ ಮಾಹಿತಿಗಾಗಿ ಕಳುಹಿಸಿದೆ.
2. ಶ್ರೀ.ಕೂರ್ಲಪ್ಪ, ತಿಗಳರಪಾಳ್ಯ ರವರ ಮಾಹಿತಿಗಾಗಿ ಕಳುಹಿಸಿದೆ.
3. ಶ್ರೀ.ಸತೀಶ್, ಜಿ.ಹೊಸಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.

4. ಶ್ರೀ.ಮಂಜುನಾಥ್, ಚನ್ನನಾಯಕನಪಾಳ್ಯ ರವರ ಮಾಹಿತಿಗಾಗಿ ಕಳುಹಿಸಿದೆ.
5. ಶ್ರೀ.ಮುನಿನಾರಾಯಣಪ್ಪ, ಇಂದಿರಾನಗರ ರವರ ಮಾಹಿತಿಗಾಗಿ ಕಳುಹಿಸಿದೆ.
6. ಶ್ರೀ.ನಟರಾಜ್, ವಿದ್ಯಾಮಾನ್ಯ ನಗರ ವೆಸ್ಟ್ ರವರ ಮಾಹಿತಿಗಾಗಿ ಕಳುಹಿಸಿದೆ.
7. ಶ್ರೀ.ಗರುಡಪ್ಪ, ತಿಳಗರಪಾಳ್ಯ ರವರ ಮಾಹಿತಿಗಾಗಿ ಕಳುಹಿಸಿದೆ.
8. ಶ್ರೀ.ಮಾಲಾತೇಶ್, ದೊಡ್ಡಬಿದರಕಲ್ಲು ರವರ ಮಾಹಿತಿಗಾಗಿ ಕಳುಹಿಸಿದೆ.
9. ಶ್ರೀಮತಿ.ಮಂಗಳಮ್ಮ, ಮಾರಣ್ಣ ಲೇಔಟ್, ರವರ ಮಾಹಿತಿಗಾಗಿ ಕಳುಹಿಸಿದೆ.
10. ಶ್ರೀಮತಿ.ಸುಮಿತ್ರ, ಅಂದ್ರಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
11. ಶ್ರೀಮತಿ.ಪುಟ್ಟಮ್ಮ, ತಿಗಳರಪಾಳ್ಯ ರವರ ಮಾಹಿತಿಗಾಗಿ ಕಳುಹಿಸಿದೆ.

**ಅಧಿಕಾರಿಗಳ ಮಾಹಿತಿಗಾಗಿ**

1. ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ. ರವರ ಆಪ್ತಶಾಖೆಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಮಂಡಿಸಿದೆ.
3. ಮುಖ್ಯ ಅಭಿಯಂತರರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಮಂಡಿಸಿದೆ.
4. ಉಪ ನಿಯಂತ್ರಕರು (ಹಣಕಾಸು), ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಕೆಂ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೇ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ರವರ ಮಾಹಿತಿಗಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ ರವರ ಮಾಹಿತಿಗಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಟಿ.ಡಬ್ಲ್ಯೂ.ಎಸ್.ಎಸ್.ಟಿ ರವರ ಮಾಹಿತಿಗಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ರವರ ಮಾಹಿತಿಗಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನೆ ರವರ ಮಾಹಿತಿಗಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರ ಮಾಹಿತಿಗಾಗಿ ಕಳುಹಿಸಿದೆ.
13. ವಲಯ ಅರಣ್ಯಾಧಿಕಾರಿಗಳು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆರೆಗಳು ವಿಭಾಗ ರವರ ಮಾಹಿತಿಗಾಗಿ ಕಳುಹಿಸಿದೆ.
15. ತೋಟಗಾರಿಕೆ ಅಧೀಕ್ಷಕರು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
16. ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.40, ದೊಡ್ಡಬಿದರಕಲ್ಲು ರವರ ಮಾಹಿತಿಗಾಗಿ ಕಳುಹಿಸಿದೆ.
17. ಪೋಲೀಸ್ ಇನ್‌ಸ್ಪೆಕ್ಟರ್, ಪೀಣ್ಯ/ಬ್ಯಾಡರಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.